# ಪಶ್ಚಿಮ ವಲಯ ವ್ಯಾಪ್ತಿಯ , ಮಲ್ಲೇಶ್ವರಂ ಉಪವಿಭಾಗದ ಸುಬ್ರಮಣ್ಯನಗರ ವಾರ್ಡ್-66ರಲ್ಲಿ ದಿನಾಂಕ: 05-02-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-66 ಸುಬ್ರಮಣ್ಯನಗರ                ಸಮಯ ಬೆಳಗ್ಗೆ 11:00 ಘಂಟೆಗೆ

ದಿನಾಂಕ: 05-02-2021 ರಂದು ವಾರ್ಡ್ ಸಂಖ್ಯೆ: 66ರ ಜನವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 66ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಪ್ಪಾಡಿಕೊಂಡು ಸಭೆ ನಡೆಸಲು ಕೋರಿದರು.

ಸಭೆಗೆ ಹಾಜರಿದ್ದವರು :

| | |
|---|---|
| 1 | ಶ್ರೀಮತಿ ಸರಸ್ವತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-66 ಸುಬ್ರಮಣ್ಯನಗರ |
| 2 | ಶ್ರೀ ಸುರೇಂದ್ರಕುಮಾರ್, ಕಿರಿಯ ಅಭಿಯಂತರರು, ವಾರ್ಡ್-66 ಸುಬ್ರಮಣ್ಯನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಶಿವರಾಜು ಮೂರ್ತಿ.ಡಿ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 4 | ಶ್ರೀಮತಿ ಅಮೃತ.ಕೆ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 5 | ಶ್ರೀ ಸಿ.ಕೆ. ಕೃಷ್ಣಯ್ಯ, ವಾಟರ್ ಇನ್ಸ್‌ಪೆಕ್ಟರ್ |
| 6 | ಶ್ರೀ ಎನ್. ನಾಗರಾಜ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 7 | ಶ್ರೀ ಜಯರಾಂ.ವಿ.ಎಲ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 8 | ಶ್ರೀ ಲಿಂಗರಾಜು, ಹಿರಿಯ ಆರೋಗ್ಯ ಪರಿವೀಕ್ಷರು |
| 9 | ಶ್ರೀ ಕೆ ಶ್ರೀನಿವಾಸ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀಮತಿ ಸರೋಜಾ, ಡೇ ಕೇರ್ ಸೆಂಟರ್ |
| 11 | ಶ್ರೀ ಬಾಬು. ಆರ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 12 | ಶ್ರೀ ಕವಿತ, ಸಹಾಯಕ ಅಭಿಯಂತರರು |
| 13 | ಶ್ರೀ ಕೆ. ಜಯಮೂರ್ತಿ, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 14 | ಶ್ರೀಮತಿ ಭಾಗ್ಯ.ಆರ್, 9980401026 |
| 15 | ಶ್ರೀ ಕೆ. ನಾಗರಾಜ್ ಕಂದಾಯ ಪರಿವೀಕ್ಷಕರು |
| 16 | ಶ್ರೀ ನಾಗರಾಜ್, 9845873998 |

Scanned with CamScanner

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀಮತಿ ಸರಸ್ವತಿ.ಡಿ. ನೋಡಲ್ ಅಧಿಕಾರಿಗಳು ವಾರ್ಡ್-66 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಬಿಬಿಎಂಪಿ ಇಂಜಿನಿಯರಿಂಗ್ ವಿಭಾಗ**

- 1ನೇ ಮುಖ್ಯರಸ್ತೆ, ಸುಬ್ರಮಣ್ಯನಗರದಲ್ಲಿರುವ ಸುಧಾ ವೈನ್ಸ್ ರಸ್ತೆಯಲ್ಲಿ ಪ್ಯಾಚ್‌ವರ್ಕ್‌ನ್ನು ತುರ್ತಾಗಿ ಹಾಕಿಸಬೇಕು
- ಗರಡಿ ಮನೆ ಮುಂಭಾಗ ರಸ್ತೆಗೆ ಕಾಂಕ್ರೀಟ್ ಹಾಕಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.
- 15ನೇ ಮುಖ್ಯರಸ್ತೆ ಎ ಬ್ಲಾಕ್‌ನಲ್ಲಿ ರಸ್ತೆ ಮಾಡಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಬಿಬಿಎಂಪಿ ಬೀದಿ ದೀಪ ವಿಭಾಗ**

- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಸಮರ್ಪಕ ನಿರ್ವಹಣೆಗಾಗಿ ಸಂಬಂಧಪಟ್ಟ ವಿದ್ಯುತ್ ಅಧಿಕಾರಿಯವರಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸುವಂತೆ ತಿಳಿಸಲಾಯಿತು. ಹಾಗೂ ಮುಂದಿನ ಸಭೆಯಲ್ಲಿ ಹಾಜರಿರುವಂತೆ ತಿಳಿಸಲು ತೀರ್ಮಾನಿಸಲಾಯಿತು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ**

- ಗಾಯತ್ರಿನಗರ ಮುಖ್ಯರಸ್ತೆಯ ರಾಜ್‌ಕುಮಾರ್ ಪುತ್ಥಳಿ ಹತ್ತಿರದಿಂದ ಸ್ಯಾನಿಟರಿ ಪೈಪ್‌ಲೈನ್ ಗರಡಿ ಮನೆ ಕಡೆಗೆ ಡೈವರ್ಟ್ ಮಾಡಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕಂದಾಯ ಇಲಾಖೆ**

- ಇ ಬ್ಲಾಕ್ 1ನೇ ಮುಖ್ಯರಸ್ತೆಯಲ್ಲಿ ಹೊಸದಾಗಿ ನಿರ್ಮಾಣ ಹಂತದಲ್ಲಿರುವ ಕಟ್ಟಡವನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಕಂದಾಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಮೇಲಾಧಿಕಾರಿಗಳಿಗೆ ಪತ್ರ ಬರೆದು ಸಿಬ್ಬಂದಿಗಳನ್ನು ನೀಡಲು ಸೂಚಿಸಲಾಯಿತು.

ಸಭೆಗೆ ಕೆಲವು ಇಲಾಖೆಯ ಅಧಿಕಾರಿಗಳು/ನೌಕರರುಗಳು ಗೈರು ಹಾಜರಿರುವುದರಿಂದ ಮುಂದಿನ ಸಭೆಗೆ ತಪ್ಪದ್ದೇ ಹಾಜರಾಗುವಂತೆ ತಿಳಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ, 5/2/2021.
ಸಹಾಯಕ ಅಭಿಯಂತರರು, ವಾರ್ಡ್-66
ಸುಬ್ರಮಣ್ಯನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

ಸಹಿ/-
ಅಧ್ಯಕ್ಷರು
ನೋಡಲ್ ಅಧಿಕಾರಿಗಳು, ವಾರ್ಡ್-66
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner